SHRI K. PRABHAKAR (Minister for Rural Development and Panchayati Raj).—

(*a*) (i) Sunk 767
(ii) Successful 604

(*b*) There is no S. P. D. rate contract for hand pumps.

(*c*) About Rs. 12,000.

CALLING ATTENTION TO A MATTERS OF URGENT PUBLIC IMPORTANCE:

re: Strike by Aluminium Factory Warneers, Belgaum

SRI B. B. SAYANAK (Belgaum).—I call the attention of the Minister for Labour to the strike by Aluminium Factory workers in Belgaum.

SRI C. N. PATIL (Minister for Labour).—Regarding this I may be allowed three days time because conciliation is in progress. We may achieve something today or tomorrow. I will make a statement on Saturday or Monday.

SRI B. B. SAYANAK.—Today it is 57th day of strike. The loss to the Central Government is Rs one crore per month and to the State Government it is Rs. 10 lakhs. The workers are also suffering. I request you to direct him to make a statement tomorrow. Today there is conciliation he can make a statement tomorrow.

SRI C. N. PATIL.—If conciliation succeeds today, tomorrow I will make a statement.

Notice under Rule 312

re : fall in prices of Silk Cocoons.

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷಣಿಯಂವರೇ ಇವೊತ್ತಿನದಿವಸ ನಮ್ಮ ರಾಜ್ಯ ದಲ್ಲಿ ರೇಷ್ಮೆ ವ್ಯವಸಾಯ ಬಹಳ ಮುಖ್ಯವಾದುದು. ನಮ್ಮ ರಾಜ್ಯಕ್ಕೆ ಅತಿ ಹೆಚ್ಚಿನ ಫಾರಿನ್ ಎಕ್ಸ್‌ಚೇಂಜನ್ನು ತರುತ್ತಾ ಇದ್ದಂತಹ ಈ ರೇಷ್ಮೆ ವ್ಯವಸಾಯದ ಪರಿಸ್ಥಿತಿ ಏನಾಗಿದೆ ಎಂದರೆ ಎರಡು ಲಕ್ಷ ರೈತರ ತಲೆಯ ಮೇಲೆ ಒಂದು ದೊಡ್ಡ ಗಿಟ್ಟಿವನ್ನು ಎಳೆದಂತಹ ಒಂದು ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣವೇನೆಂದರೆ ಒಂದು ಕೆ ಜಿ. ರೇಷ್ಮೆಗೆ ೨೫—೩೫ ರೂಪಾಯಿಗಳು ಇದ್ದಂಥಾದ್ದು ಇವೊತ್ತು ಒಂದು ಕೆ ಜಿ. ರೇಷ್ಮೆಗೆ ೬, ೭, ೮, ೧೦, ರೂಪಾಯಿಗಳಿಗೆ ಇಳಿದಿದೆ. ಇದರಿಂದ ಈ ರೇಷ್ಮೆ ವ್ಯವಸಾಯವನ್ನು ಅವಲಂಬಿಸಿರತಕ್ಕ ಎರೆಡು ಲಕ್ಷ ಕುಟುಂಬಗಳಿಗೆ ಹಾನಿಯಾಗಿ ಅವರಲ್ಲಿ ಇದ್ದಂತಹ ಅಸ್ತಿಪಾಸ್ತಿಗಳೆಲ್ಲಾವೂ ಹೋಗ ತಕ್ಕಂಥಾ ಪರಿಸ್ಥಿತಿ ಬಂದಿದೆ ಆದರೆ ಈ ಬಗ್ಗೆ ಸರ್ಕಾರದವರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ಇರವುದು ತುಂಬಾ ಶೋಚನೀಯವಾಗಿದೆ ರೈತರೇ ದೇಶದ ಬೆನ್ನುಮೂಳೆ ಎಂದು ಹೇಳತಕ್ಕಂಥಾ ಈ ಸರ್ಕಾರ ಇವೊತ್ತು ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ರೈತರನ್ನು ಬಗ್ಗುಬಡಿಯಂ ಪರಿಸ್ಥಿತಿಗೆ ಬಂದಿದೆ. ನಾನು ವೈಯ್ಯಕ್ತಿಕವಾಗಿ ಈ ಖಾತೆಯ ಮಂತ್ರಿಗಳಾದ ಶ್ರೀಮಾನ್ ಶ್ರೀರಾಮುಲು ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಅವರು ದಕ್ಷತೆಯಿಂದ

ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆ. ಅಂಥಾವರು ಈ ಒಂದು ಕೆಲಸವನ್ನು ಮಾಡದೇ ಇರುವುದು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ರೈತರಿಗೆ ಆಗಿರತಕ್ಕಂಥಾ ನಷ್ಟವನ್ನು ಸರ್ಕಾರದವರು ಯಾವರೀತಿ ಬಗೆಹರಿಸಬೇಕು ಎಂಬುದನ್ನು ಯೋಚನೆ ಮಾಡಿದ್ದಾರೆಯೇ ? ಈ ಒಂದು ರೇಷ್ಮೆ ಚಲೆಯು ಇಳಿದಿರುವುದರಿಂದ ೨೫ ಲಕ್ಷ ಜನಗಳಿಗೆ ತೊಂದರೆಯಾಗುತ್ತಿದೆ. ಈ ರೀತಿ ರೇಷ್ಮೆ ಬೆಲೆ ಕಡಿಮೆಯಾಗುತ್ತಾ ಹೋದರೆ ರೈತರು ಹಿಪ್ಪನೇರಳೆ ತೋಟ ಮಾಡುವುದನ್ನು ಬಿಟ್ಟು ಬಿಡುವ ಕಾಲ ಬಂದಿದೆ. ಅನೇಕ ರೇಷ್ಮೆ ವ್ಯವಸಾಯವನ್ನು ಮಾಡತಕ್ಕ ರೈತರ ಕುಟುಂಬಗಳಿಗೆ ತೊಂದರೆಯಾಗಿದೆ. ರೇಷ್ಮೆಯ ಬೆಲೆ ಇಳಿದಿರತಕ್ಕದ್ದು ಅವರಿಗೆ ತಂಬಾ ಆಘಾತವನ್ನುಂಟು ಮಾಡಿದೆ ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಸಿಲ್ಕ್ ಮಾರ್ಕೆಟ್ ಫೆಡರೇಷನ್ ಎನ್ನುವ ಒಂದು ಸಂಸ್ಥೆ ಇದೆ. ಅದರ ಆಡಳಿತದ ಬಗ್ಗೆ ಮಾನ್ಯ ರೇಷ್ಮೆ ಖಾತೆಯ ಮಂತ್ರಿಗಳಾದ ಶ್ರೀರಾಮುಲು ಅವರು ಒಂದು ದೊಡ್ಡದಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ಹೇಳಿದ್ದಾರೆ. ಈ ಸಿಲ್ಕ್ ಮಾರ್ಕೆಟ್ ಫೆಡರೇಷನ್ ಕೆವಲ ಕೆಲವರ ಹಿತವನ್ನು ಕಾಪಾಡುವುದಕ್ಕೆ ಇದೆಯೋ ಅಥವಾ ರೈತರ ಹಿತವನ್ನು ಕಾಪಾಡುವುದಕ್ಕೆ ಇದೆಯೋ ನನಗೆ ಅರ್ಥವಾಗುವುದಿಲ್ಲ. ರೇಷ್ಮೆಯನ್ನು ಕೊಂಡು ಕೊಳ್ಳುವುದನ್ನು ನಿಲ್ಲಿಸಿರುವುದರಿಂದ ಮಾರ್ಕೆಟ್‌ನಲ್ಲಿ ರೇಷ್ಮೆ ಗೂಡಿಂ ಬೆಲೆ ಇಳಿದಿದೆ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ತಿಳಿಸಿಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷಣಿಯವರೇ ನ್ಯಾಯದ ಕೆಳಗೆ ತಮ್ಮ ಆಶ್ರಯವನ್ನು ಬೇಡಿ ತಮ್ಮ ಅಪ್ಪಣೆ ಪಡೆದು ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು.—ನ್ಯಾಯ ದೊರೆಯುತ್ತದೆ ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಕೆ. ಶ್ರೀರಾಮುಲು (ರೇಷ್ಮೆ, ಶಾಖೆಯ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷಣಿಯವರೇ ರೇಷ್ಮೆ ಗೂಡಿನ ಬೆಲೆ ಇಳಿದಿರುವುದು ನಿಜ ಇದು ಕೆಲವಾರು ಕಾರಣಗಳಿಂದ ಆಗಿದೆ. ೧೯೬೫-೬೬ ನೇ ಸಾಲಿನಲ್ಲಿ ಕರ್ನಾಟಕದಲ್ಲಿ ೨೯೧ ಲಕ್ಷ ಕೆ. ಜಿ. ರೇಷ್ಮೆ ಉತ್ಪಾದನೆಯಾಗಿದೆ. ೧೯೬೬-೬೭ ನೇ ಸಾಲಿನಲ್ಲಿ ೩೦೦ ಲಕ್ಷ ಕೆ. ಜಿ. ರೇಷ್ಮೆ ಉತ್ಪಾದನೆಯಾಗಿದೆ. ಎಂದರೆ ೯ ಲಕ್ಷ ಕೆ. ಜಿ. ರೇಷ್ಮೆ ಈ ವರ್ಷ ಹೆಚ್ಚು ಉತ್ಪಾದನೆಯಾಗಿದೆ. ಆಂಧ್ರದಲ್ಲಿ ೧೯೬೫-೬೬ನೇ ಸಾಲಿನಲ್ಲಿ ೩೫೯ ಲಕ್ಷ ಕೆ. ಜಿ ರೇಷ್ಮೆ ಉತ್ಪಾದನೆಯಾಗಿದೆ. ೧೯೬೬-೬೭ನೇ ಸಾಲಿನಲ್ಲಿ ೫೨೯ ಲಕ್ಷ ಕೆ. ಜಿ. ರೇಷ್ಮೆ ಉತ್ಪಾದನೆಯಾಗಿದೆ. ಎಂದರೆ ಈ ವರ್ಷ ಒಂದು ಲಕ್ಷ ೭೦ ಸಾವಿರ ಕೆ. ಜಿ ರೇಷ್ಮೆ ಹೆಚ್ಚು ಉತ್ಪಾದನೆ ಆಂಧ್ರಪ್ರದೇಶದಲ್ಲಿ ಆಗಿದೆ. ತಮಿಳುನಾಡಿನಲ್ಲಿ ೬೫-೬೬ರಲ್ಲಿ ೨ ಲಕ್ಷ ಕೆ ಜಿ. ರೇಷ್ಮೆ ಉತ್ಪಾದನೆಯಾಗಿದೆ. ೧೯೬೬-೬೭ರಲ್ಲಿ ೩ ಲಕ್ಷ ಕೆ. ಜಿ. ರೇಷ್ಮೆ ಉತ್ಪಾದನೆಯಾಗಿದೆ. ಒಟ್ಟಿನ. ೧೯೬೫-೬೬ ಮತ್ತು ೬೬-೬೭ನೇ ಸಾಲಿನಲ್ಲಿ ೧೧ ಲಕ್ಷ ರೇಷ್ಮೆ ಉತ್ಪಾದನೆ ಜಾಸ್ತಿಯಾಗಿದೆ. ಈ ರೇಷ್ಮೆಗೆ ಎರಡು ಕೋಟಿ ೨೦ ಲಕ್ಷ ರೂಪಾಯಿಗಳ ಬೆಲೆ ಆಗುತ್ತದೆ. ಹೊರಗಡೆಯಿಂದ ಪಾಶ್ಚಿಮಾತ್ಯದೇಶದಿಂದ ೪೩ ಸಾವಿರ ಕೆ. ಜಿ. ರೇಷ್ಮೆಗೂ ಹೆಚ್ಚಿಗೆ ೩/೨ ಕೋಟಿ ರೂಪಾಯಿ ಈ ವರ್ಷದಲ್ಲಿ ಹೆಚ್ಚಿನ ವ್ಯಾಪಾರ ಆಗುವಂತಹ ಪರಿಸ್ಥಿತಿ ಇದೆ ತಮಗೆ ಗೊತ್ತಿದೆ. ಕರ್ನಾಟಕದಲ್ಲಿ ಒಂದು ವರ್ಷಕ್ಕೆ ೭೦ ಕೋಟಿ ರೂಪಾಯಿಗಳ ವ್ಯವಹಾರವಾಗುತ್ತದೆ.

ಆ ಮೇಲೆ ಶ್ರೀಮಾನ್ ಬೈರೇಗೌಡರು ಹೇಳಿದರು ಸಿಲ್ಕ್ ಮಾರ್ಕೆಟ್ ಫೆಡರೇಷನ್‌ನವರು ಮತ್ತು ಸರ್ಕಾರದವರು ರೇಷ್ಮೆ ವ್ಯವಸಾಯಗಾರರಿಗೆ ಸಹಾಯ ಮಾಡುತ್ತಿಲ್ಲ ಎಂದು. ಅವರು ಹೇಳಿದ ಮಾತು ಸರಿಯಲ್ಲ. ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸರ್ಕಾರದವರು ಫೆಡರೇಷನ್ನಿಗೆ ಪ್ರತಿ ೭೫ ಲಕ್ಷ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದಾರೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ನಾನು ಈಗಾಗಲೇ ತಿಳಿಸಿದ್ದೇನೆ. ಇದರ ಬಗ್ಗೆ ಪೂರ್ಣವಾದ ತನಿಖೆಯಾಗಬೇಕು ಎಂದು ಸರ್ಕಾರದವರು ಆಡಿಟರ್‌ಗಳಿಗೆ ಹೇಳಿದ್ದಾರೆ. ಆದ್ದರಿಂದ ರೇಷ್ಮೆ ಬೆಳೆಗಾರರಿಗೆ ಸರ್ಕಾರದ ಪ್ರೋತ್ಸಾಹ ಇಲ್ಲ ಎನ್ನುವ ನಿರಾಶೆ ಮಾನ್ಯಸದಸ್ಯರಿಗೆ ಬೇಡ. ಈಗಾಗಲೇ ನಾವು ೧೦ ಕೆ. ಜಿಗೆ ಒಂದು ಕೆ. ಜಿ. ರೆಂಟ್‌ಟಾ ಬರತಕ್ಕದ್ದಕ್ಕೆ ೨೧ ರೂಪಾಯಿ ಕನಿಷ್ಟ ಬೆಲೆ ಕೊಡಬೇಕು ಎಂದು ಶಿಫಾರಸ್ಸು ಮಾಡಿ ನಾವು ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಿದ್ದೇವೆ. ಆದು ಅಲ್ಲಿಂದ ಬಂದ ಮೇಲೆ ಜಾರಿಯಲ್ಲಿ ಬರಬಹುದು.

ಎರಡನೆಯದಾಗಿ ನಮ್ಮ ಕರ್ನಾಟಕದಲ್ಲಿ ೭೦ ಕೋಟಿ ರೂಪಾಯಿಂಗಳ ವ್ಯವಹಾರವನ್ನು ನಡೆಸತಕ್ಕ ಜವಾಬ್ದಾರಿಯನ್ನು ಸರ್ಕಾರದವರಂ ತೆಗೆದುಕೊಳ್ಳಬೇಕಂ ಎನ್ನುವ ಇಚ್ಛೆ ಇದೆ. ಇದು ತಕ್ಷಣ ಮಾಡತಕ್ಕ ಕೆಲಸವಲ್ಲ. ಇದನ್ನು ಪರಿಶೀಲನೆ ಮಾಡಬೇಕು. ಈ ರೇಷ್ಮೆ ವ್ಯವಸಾಯಂಕ್ಕೆ ಸಂಬಂಧಪಟ್ಟಹಾಗೆ ೩೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಅದನ್ನು ನಾವು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದೇವೆ. ರೈತರಿಗೆ ತೊಂದರೆಯಾಗಬಾರದು, ಎಲ್ಲಾ ಕಾಲದಲ್ಲಿಯೂ ರೇಷ್ಮೆಗೆ ಒಂದು ಸರಿಯಾದಂತಹ ಬೆಲೆ ಸಿಕ್ಕಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಕೇಂದ್ರ ಸರ್ಕಾರದ ಸಹಾಯದಿಂದ ಮತ್ತು ರಾಜ್ಯ ಸರ್ಕಾರದ ಸಹಾಯದಿಂದ ಈ ಕಾರ್ಯವನ್ನು ಮಾಡಬೇಕಾಗುತ್ತದೆ. ಈ ರೀತಿಯಾಗಿ ಸರ್ಕಾರದವರು ರೇಷ್ಮೆ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕೆಂದೇ ಸರ್ಕಾರದವರಂ ಯೋಜನೆಗಳನ್ನು ರೂಪಿಸಿ ಕ್ರಮ ತೆಗೆದುಕೊಳ್ಳುತ್ತಾ ಇರುವಾಗ ಸರ್ಕಾರಕ್ಕೆ ರೇಷ್ಮೆ ವ್ಯವಸಾಯದ ಬಗ್ಗೆ ಕಳಕಳಿಯಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ

ಸರ್ಕಾರಕ್ಕೆ ಅದರ ಬಗ್ಗೆ ಕಳಕಳಿ ಇಲ್ಲ ಎನ್ನುವ ಪ್ರಶ್ನೆಯಿಲ್ಲ. ಮುಖ್ಯವಾಗಿರತಕ್ಕಂಥ ಪ್ರಶ್ನೆ ಬಂದಿದೆ. ನಾವು ನೀವು ಎಲ್ಲರೂ ಸೇರಿ ಬಿಡಿಸತಕ್ಕಂಥ ಪ್ರಶ್ನೆ ಇದು. ಇದರ ಬಗ್ಗೆ ಕಳಕಳಿಯಿಂದ ಹೇಳಿದರೂ ಕೂಡ ಹಣವನ್ನು ಸಂಗ್ರಹಿಸಿ ರಾಮೆಟೀರಿಯಲ್ಸ್‌ನ್ನು ಕೊಂಡು-ಕೊಂಡರೂ ಕೂಡ ಅದನ್ನು ಮಾರತಕ್ಕಂಥ ಮಾರ್ಕೆಟ್ ಬೇಕಾಗಿದೆ ಈ ಮಾರ್ಕೆಟ್ ಪ್ರಶ್ನೆಯನ್ನು ಹೇಗೆ ಇತ್ಯರ್ಥ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ಹೀಗಿರತಕ್ಕಂಥ ವಿಷಯಕ್ಕೆ ಹೆಚ್ಚು ಗಮನಕೊಟ್ಟು ರೈತರು ಬೆಳೆದಂತ ರೇಷ್ಮೆಯನ್ನು ಎಷ್ಟೇ ಬೆಲೆಗೆ ಕೊಂಡುಕೊಂಡರೂ ಕೊಂಡುಕೊಂಡಂತಹ ಪದಾರ್ಥವನ್ನು ಎಲ್ಲಿ ಮಾರಬೇಕು ಎಂಬ ಪ್ರಶ್ನೆ ಇದೆ. ಇದನ್ನು ಬಹಳ ದಿವಸ ಸ್ಟಾಕ್ ಇಡುವುದಕ್ಕಾಗುವುದಿಲ್ಲ. ಒಂದು ವರ್ಷದವರೆಗೆ ಸ್ಟಾಕ್ ಇಟ್ಟರೂ ಅದರ ಮೇಲೆ ಸ್ಟಾಕ್ ಇಟ್ಟರೆ ಪ್ರಯೋಜನಕ್ಕೆ ಬರುವುದಿಲ್ಲ ತಾವು ಒಂದು ಕೇಜಿ ರೇಷ್ಮೆಗೆ ೫೫-೬೦ರೂ ನಂತೆ ಮಾರುತ್ತಿದ್ದಾರೆ ಎಂದು ಹೇಳಿದ್ದೀರಿ. ಇದು ಮೇ ೧೫ರಲ್ಲಿ ಇದ್ದಂಥಾದ್ದು. ಇತ್ತೀಚೆಗೆ ಬೆಲೆ ಜಾಸ್ತಿಯಾಗಿದೆ. ತಾವೇ ಹೇಳಿರುವ ರೀತಿಯಲ್ಲಿ ೫೫-೬೦ ರೂಪಾಯಿಗಳು ಅಲ್ಲ. ಈಗ ಹೆಚ್ಚಿನ ಬೆಲೆ ೧೯ ರೂಪರೆಗೆ ಹೋಗಿದೆ. ಕನಿಷ್ಟ ಬೆಲೆ ೧೭ರೂಪರೆಗೆ ಹೋಗಿದೆ. ಈ ಬಗ್ಗೆ ರಾಮನಗರದಿಂದ ರಿಪೋರ್ಟ್ ತರಿಸಿಕೊಂಡಿದ್ದೇವೆ. ನನಗೆ ಇಲಾಖೆಯಂದರಂ ಕೊಟ್ಟಿರತಕ್ಕಂಥ ವರದಿ ಪ್ರಕಾರ ಹೆಚ್ಚಿನ ಬೆಲೆ ೧೯ ರೂಪಾಯಿಗಳು; ಮಂತ್ತು ಕನಿಷ್ಟ ಬೆಲೆ ೧೭ ರೂಪಾಯಿಗಳವರೆಗೆ ಮಾರಾಟವಾಗಿದೆ. ಮೇ ೧೫ನೇ ತಾರೀಖಿನಲ್ಲಿ ಏನಂ ಬೆಲೆ ಇಳಿಯುತ್ತೋ ಅದಂ ಇತ್ತೀಚೆಗೆ ಬೆಲೆ ಏರುತ್ತಿದೆ ಎಂದಂ ವರದಿಯಲ್ಲಿ ಕೂಡ ಇದೆ. ತಾವು ರೂಲ್ ೩೧೨ರ ಕೆಳಗೆ ಪ್ರಶ್ನೆಯನ್ನು ಕೇಳಿದ್ದೀರಿ. ತಮ್ಮ ಕಳಕಳಿ ಸರ್ಕಾರಕ್ಕೆ ಗೊತ್ತಿದೆ. ಈ ಬಗ್ಗೆ ೩೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರಕ್ಕೆ ಕಳಿಸಿದ್ದೇವೆ; ಅಂದರೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಅನುಮೋದನೆಗೆ ಕಳಿಸಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಯವರು ಈ ಒಂದು ಸೊಸೈಟಿಯಲ್ಲಿ ಆಗಿರುವ ೭ ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ತನಿಖೆ ನಡೆಯಬೇಕು ಎಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರೂಲ್ ೩೧೨ರ ಕೆಳಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಹೇಳಿದ್ದೇನೆ. ಈ ಬಗ್ಗೆ ವ್ಯವಸ್ಥೆಯಾಗುತ್ತದೆ. ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟರೆ ಒಂದು ಕೇಜಿ ೧೨ ರೆಂಡೆಟ್ಟು ಇರುವ ರೇಷ್ಮೆಗೂಡಿಗೆ ೨೧ ರೂಪಾಯಿಗಳಂ ಕನಿಷ್ಟ ಬೆಲೆ ಸಿಕ್ಕುವಂತೆ ಅವಕಾಶ ಇದೆಯೆಂದು ಮಾನ್ಯ ಸದಸ್ಯರ ರೂಲ್ ೩೧೨ರ ಕೆಳಗೆ ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಯವರ ಪ್ರಯತ್ನಕ್ಕೆ ನನ್ನ ಅಭಿನಂದನೆ ಉಂಟು. ಮಾನ್ಯ ಮಂತ್ರಿಯವರು ಒಂದು ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಗೆ ಕಳಿಸಿದ್ದೇವೆ ಎಂದು ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ದಿನ ಸಂಜೆಯೇ ಆಗಲಿ, ನಾಳೆಯೇ ಆಗಲಿ, ಅವರು ಯಾವ ದಿವಸ ಈ ಯೋಜನೆಗೆ ಅನುಮೋದನೆ ಕೊಡುತ್ತಾರೆಯೋ ಆಗ ತಕ್ಷಣ ಕೆಲಸವಾಗದಿದ್ದರೆ ರೈತರಿಗೆ ಅನಾಹುತವಾಗುತ್ತದೆ, ಆದ್ದರಿಂದ ಈ ಬಗ್ಗೆ ಬೇಗ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಿದೆಯೆಂದು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತಂದು ಈ ಒಂದು ಕೆಲಸವನ್ನು ಮಾನ್ಯ ಶ್ರೀರಾಮುಲುರವರು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯನ್ನು ದೊರಕಿಸಿಕೊಟ್ಟು ಜಾಗ್ರತೆಯಾಗಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ಈಗಾಗಲೇ ಕೇಂದ್ರ ಸರ್ಕಾರದವರು ರಾಮೆಟೀರಿಯಲ್ಸ್ ಬ್ಯಾಂಕ್ ಮಾಡಲು ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧ ಕೋಟಿ ರೂಪಾಯಿಗಳು ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಬಂದಿದೆ. ಆದ್ದರಿಂದ ಅದು ಇಷ್ಟರಲ್ಲೇ ತೀರ್ಮಾನವಾಗುತ್ತದೆ ಆದು ತೀರ್ಮಾನವಾಗುವವರೆಗೆ ಈ ಒಂದು ಕಾರ್ಯ ನಿಲ್ಲುವಂತೆ ಆಗತ್ಯವಿಲ್ಲ. ರೈತರ ರೇಷ್ಮೆ ಗೂಡಿಗೆ ತಕ್ಕ ಬೆಲೆ ಸಿಕ್ಕುವುದಕ್ಕೆ ಸಾಕಷ್ಟು ಅವಕಾಶ ಇದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಮಂತ್ರಿಯವರು ಕಳಿಸಿರುವ ಯೋಜನೆಗೆ ಯಾವಾಗ ಅನುಮೋದನೆ ಕೊಡುತ್ತಾರೆ ಎಂಬ ಬಗ್ಗೆ ಹೇಳಲಿಲ್ಲ.

ಶ್ರೀ ಕೆ. ಶ್ರೀರಾಮುಲು.— ಈ ವಿಚಾರದಲ್ಲಿ ಈ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ ವಿಚಾರ ಮಾಡಬೇಕಾಗಿದೆ. ಏಕೆಂದರೆ ಇದು ೩೦ ಕೋಟಿ ರೂಪಾಯಿಗಳ ವ್ಯವಹಾರವಾಗಿದೆ ಒಬ್ಬರೇ ತೀರ್ಮಾನ ತೆಗೆದುಕೊಳ್ಳತಕ್ಕಂಥ ವಿಷಯವಲ್ಲ ಇದು ನನ್ನ ಇಲಾಖೆಯಲ್ಲೂ ಅಷ್ಟು ದುಡ್ಡು ಇಲ್ಲ.

Objection to moving of Demands relating to Co-operation Department

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸಹಕಾರ ಸಚಿವರು ಈ ಸಭೆಯ ಮುಂದೆ ಅವರ ಇಲಾಖೆಯ ಬೇಡಿಕೆಗಳನ್ನು ಏನು ಇಡುತ್ತಾರೆ ಈ ಇಲಾಖೆಯ ಬೇಡಿಕೆಗಳಿಗೆ ನಾವು ಸಹಕಾರವನ್ನು ಕೊಡುವುದಕ್ಕೆ ಸಿದ್ಧರಿಲ್ಲ ಏಕೆಂದರೆ ಅವರು ಸಹಕಾರ ಸಚಿವರಾದ ಮೇಲೆ ಸಹಕಾರೀ ರಂಗವನ್ನು ಕಾಂಗ್ರೆಸ್ ರಂಗವನ್ನಾಗಿ ಮಾಡಿದ್ದಾರೆ.

ಅಧ್ಯಕ್ಷರು.—ತಾವು ಬೇಡಿಕೆ ಮೇಲೆ ಮಾತನಾಡಿ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಅವರ ಬೇಡಿಕೆಯನ್ನು ಈ ಸಭೆಯು ಮುಂದೆ ಇಡುವುದಕ್ಕೆ ಸಹಕಾರ ಕೊಡುವುದಿಲ್ಲ ನಿನ್ನೆ ಮತ್ತು ಮೊನ್ನೆಯಿಂದ ಕೆಲವು ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯು ಮುಂದೆ ಏನು ಇಟ್ಟಿದ್ದರು ಅದಕ್ಕೆ ನಾವು ಸಹಕರಿಸಿದ್ದೇವೆ ಆದರೆ ಈ ಇಲಾಖೆಯ ಬೇಡಿಕೆಗಳನ್ನು ಈ ಸಭೆಯು ಮುಂದೆ ಇಡುವುದಕ್ಕೆ ನಾವು ಸಹಕಾರ ಕೊಡುವುದಿಲ್ಲ. ಮಾನ್ಯ ಸಹಕಾರ ಸಚಿವರು ಇಡೀ ಸಹಕಾರ ರಂಗವನ್ನು ತಮ್ಮ ಸ್ವಂತ ಸ್ವತ್ತನ್ನಾಗಿ ಮಾಡಿಕೊಂಡು ಒಂದು ಪಕ್ಷದ ರಾಜಕಾರಣಕ್ಕೆ ಅಧಿಕಾರವನ್ನು ಉಪಯೋಗ ಮಾಡಿದ್ದಾರೆ. ಈ ಸಹಕಾರ ರಂಗದಲ್ಲಿ ಒಂದು ಪಕ್ಷದ ರಾಜಕೀಯ ಕೂಡ ಇದೆಯೆಂದು ವಿಶಾದದಿಂದ ಹೇಳುತ್ತೇನೆ. ಈ ಇಲಾಖೆಯ ಬೇಡಿಕೆಯನ್ನು ಈ ಸಭೆಯು ಮುಂದೆ ಇಡುವುದಕ್ಕೆ ನಮ್ಮ ಸಹಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ೭೫ ವರ್ಷಗಳ ಕಾಲ ಸಹಕಾರ ಚಳುವಳಿಯನ್ನು ಬೆಳೆಸಬೇಕು ಎಂದು ಹೇಳಿ ಅನೇಕ ಜನರು ಶ್ರಮಿಸಿದ್ದಾರೆ. ಅದಕ್ಕೆ ಮಾನ್ಯ ರಂಗನಾಥ್‌ರವರು ಕೊಡಲಿ ಪೆಟ್ಟನ್ನು ಹಾಕಿದ್ದಾರೆಂದು ಹೇಳುತ್ತೇನೆ. ಒಂದು ಪಕ್ಷದ ರಾಜಕಾರಣವನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದ್ದರಿಂದ ಇಲ್ಲಿ ಇದಕ್ಕೆ ಸಹಕಾರ ಕೊಡುವುದಕ್ಕೆ ನಾವು ತಯಾರು ಇಲ್ಲ. ನಾನು ಈ ರೀತಿಯ ವರ್ತನೆಯನ್ನು ಸಭೆಯ ಮುಂದೆ ಅನಿವಾರ್ಯವಾಗಿ ಮಾಡಬೇಕಾಗಿದೆ. ಅದಕ್ಕಾಗಿ ಈ ಸಭೆಯು ನನ್ನನ್ನು ಕ್ಷಮಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಸಹಕಾರ ತಮಗೆ ದೊರೆಯಲಿಕ್ಕೆ ಸಾಧ್ಯವಿಲ್ಲ. ತಮ್ಮ ಬೇಡಿಕೆಯನ್ನು ಇಲ್ಲಿ ಮಂಡಿಸುವುದಕ್ಕೆ ನಾವು ಬಿಡುವುದಿಲ್ಲ. ಏಕೆಂದರೆ ೧೯೭೭ರ ಲೋಕಸಭೆಯ ಚುನಾವಣೆ ಆದಮೇಲೆ ಕರ್ನಾಟಕ ರಾಜ್ಯದಲ್ಲಿ ಸಂಮಾರು ೩೮.೮೦ರಷ್ಟು ಮತವನ್ನು ಕೊಟ್ಟಿದ್ದಾರೆ. ಅವರು ಸೊಸೈಟಿಗಳ ಬಾಗಿಲಿಗೆ ಹೋದರೆ ನೀವು ಜನತಾ ಪಕ್ಷಕ್ಕೆ ಓಟು ಕೊಟ್ಟಿದ್ದೀರಿ ; ನೀವು ದೇವೇಗೌಡರ ಮನೆಗೆ ಹೋಗಿರಿ. ಮುರಾರ್ಜಿದೇಸಾಯಿಯವರ ಮನೆಗೆ ಹೋಗಿರಿ ಎಂದು ಹೇಳಿದ್ದಾರೆ. ಆದ್ದರಿಂದ ನೀವು ಕಾಂಗ್ರೆಸ್ ಪಾರ್ಟಿಯಿಂದ ಮಂಜೂರಾತಿ ತೆಗೆದುಕೊಳಿರಿ. ಏಕೆಂದರೆ ಒಂದು ಪಕ್ಷದ ರಾಜಕಾರಣವನ್ನು ಮಾಡುವುದಕ್ಕೆ ಈ ಸಹಕಾರ ರಂಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ನಾವು ಬಿಡುವುದಿಲ್ಲ ಇದು ಇಲ್ಲಿ ಇತ್ಯರ್ಥವಾಗಬೇಕು. ನಮ್ಮ ಮೇಲೆ ತಾವು ಯಾವ ರೀತಿಯ ಕ್ರಮವನ್ನಾದರೂ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಮೊದಲು ಮಾನ್ಯ ಸಚಿವರು ಡಿಮ್ಯಾಂಡನ್ನು ಮಂಡಿಸಲಿ.

† Sri K. H. Ranganath (Minister for Co-operation).—The hon. the Leader of the Opposition has got every right to say what he wants to say—I do not want to comment on that. What he said was, that